**ದಲೋರ್ ವರದಿಯ ಮರು-ಪರಿಶೀಲನೆ: ಭಾರತಕ್ಕಿರುವ ಪಾಠಗಳು**

**ಡಾ| ಅರ್ಚನಾ ಮೆಹೆಂದಳೆ**

ಭಾರತದ ಶಿಕ್ಷಣ ವ್ಯವಸ್ಥೆಯು ಸುಧಾರಣೆಗೊಳ್ಳಲು ತುದಿಗಾಲಲ್ಲಿ ನಿಂತಿರುವಾಗ ಹಾಗು ಶಿಕ್ಷಣನೀತಿಯ ಶಿಫಾರಸುಗಳು ವಿವಿಧ ಮೂಲಗಳಿಂದ ತಮ್ಮದೇ ಸ್ಪರ್ಧಾತ್ಮಕ ನಿಲುವುಗಳ ಜೊತೆಗೆ ಉಗಮಗೊಳ್ಳುತ್ತಿರುವ ಸಂದರ್ಭದಲ್ಲಿ, ಅವುಗಳು ಯಾವುದೇ ಸ್ಪಷ್ಟಚಿತ್ರಣವನ್ನಾಗಲೀ, ಮಾರ್ಗದರ್ಶನವನ್ನಾಗಲೀ ನೀಡುವ ಬದಲು ಗೊಂದಲವನ್ನುಂಟು ಮಾಡುವ ಸಾಧ್ಯತೆಯೇ ಹೆಚ್ಚಿದೆ. ಈ ಕಾರಣದಿಂದಾಗಿ, ಪ್ರಸಕ್ತ ಶೈಕ್ಷಣಿಕ ಸವಾಲುಗಳನ್ನು, ಅಂತೆಯೇ ವೈಯಕ್ತಿಕ, ಸಾಮಾಜಿಕ ಬೆಳವಣಿಗೆಯಲ್ಲಿ ಶಿಕ್ಷಣದ ಪಾತ್ರವನ್ನು ತೀಕ್ಷ್ಣ ವಿಶ್ಲೇಷಣೆಗೆ ಗುರಿಪಡಿಸುವ, ``ಕಲಿಕೆ: ನಮ್ಮೊಳಗಿನ ಸಂಪತ್ತು'' (1996) ಎಂಬ ಶೀರ್ಷಿಕೆಯ ದಲೋರ್ ವರದಿಯ ಮರುಪರಿಶೀಲನೆ ಉಚಿತವೆನಿಸುತ್ತದೆ. ನೂತನ ಶತಮಾನದಲ್ಲಿ ತಲೆಯೆತ್ತಲಿರುವ ಕಲಿಕಾ ಸಂಬಂಧಿತ ಕಾಳಜಿಗಳನ್ನು ಶಿಕ್ಷಣ ವ್ಯವಸ್ಥೆಯು ಹೇಗೆ ಸಂಭಾಳಿಸಬಹುದು ಎಂಬುದನ್ನು ಸೂಚಿಸಲು ಹಾಗು ವಾಸ್ತವತೆಗಳನ್ನು ಪರಿಶೀಲಿಸಲು, ಜ್ಯಾಕ್ ದಲೋರ್ ಅವರ ಅಧ್ಯಕ್ಷತೆಯಲ್ಲಿ ವಿಶ್ವಸಂಸ್ಥೆಯು, ``ಇಪ್ಪತ್ತೊಂದನೇ ಶತಮಾನದ ಶಿಕ್ಷಣಕ್ಕಾಗಿ ಅಂತಾರಾಷ್ಟ್ರೀಯ ಆಯೋಗ''ವೊಂದನ್ನು ರಚಿಸಿತು. ಜಾಮ್ಟೀನ್ ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಅಂಗೀಕರಿಸಿದ ಸರ್ವರಿಗೂ ಶಿಕ್ಷಣದ ಜಾಗತಿಕ ಘೋಷಣೆಯೊಂದಿಗೆ (World Declaration on Education for All (1990) ಮೊದಲಾದ ಅಂತಾರಾಷ್ಟ್ರೀಯ ಪರಿಶ್ರಮಗಳ ಮುಂದುವರಿದ ಭಾಗವನ್ನಾಗಿ ಈ ಆಯೋಗದ ಕಾರ್ಯವನ್ನು ನೋಡಬೇಕಿದೆ. ಜಾಗತಿಕ ಬಡತನ, ಅಜ್ಞಾನ, ಪ್ರತ್ಯೇಕತೆಯ ಭಾವನೆ, ದಬ್ಬಾಳಿಕೆ, ಯುದ್ಧಗಳನ್ನು ಕಡಿಮೆ ಮಾಡುವಲ್ಲಿ, ಶಾಂತಿಪಥದಲ್ಲಿ ಸಾಗಲು ಸಹಾಯ ನೀಡುವಲ್ಲಿ ಹಾಗು ಸ್ವಾತಂತ್ರ್ಯ, ಸಾಮಾಜಿಕ ನ್ಯಾಯಗಳ ವಿಷಯಗಳಲ್ಲಿ ಇರುವ ಶಿಕ್ಷಣದ ಪ್ರಾಮುಖ್ಯವನ್ನು ಈ ಘೋಷಣೆಯು ಒತ್ತಿ ಹೇಳಿತು. ಈ ಪ್ರಮುಖ ವರದಿಯ ಮುಖ್ಯ ಅಭಿಪ್ರಾಯಗಳನ್ನು ಪರಿಶೀಲಿಸಲು ಹಾಗು ಭಾರತದ ಶಿಕ್ಷಣಕ್ಷೇತ್ರದಲ್ಲಿ ಇಂದಿನ ದಿನಗಳಲ್ಲಿ ಆಗುತ್ತಿರುವ ಸತತ ನೀತಿ ಬದಲಾವಣೆಗಳ ಸುಳಿಯಲ್ಲಿ ಸಿಲುಕಿರುವ ನಮಗೆ ಮಾರ್ಗದರ್ಶನ ನೀಡಲು ಇದು ಹೇಗೆ ಸೂಕ್ತವಾಗಿದೆ ಎಂದು ಅರ್ಥಮಾಡಿಕೊಳ್ಳಲು ಹೊಸ ಶತಮಾನದ ಒಂದೂವರೆ ದಶಕವೇ ಕಳೆದ ಬಳಿಕ ಕಾಲ ಇದೀಗ ಕೂಡಿಬಂದಿದೆ.

**ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಸಮುದಾಯಗಳ ನಿರ್ಮಾಣ:**

ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಸಮುದಾಯಗಳ ನಿರ್ಮಾಣದ ಸಾರವು ``ಕಲಿಯುವುದು ಹೇಗೆ ಎಂಬುದನ್ನು ಕಲಿ''ಯುವುದರಲ್ಲಿ ಅಡಗಿದೆ ಎಂದು ದಲೋರ್ ವರದಿ ಒತ್ತಿ ಹೇಳುತ್ತದೆ. ಇಂತಹ ಸಮುದಾಯಗಳಲ್ಲಿರುವ ಪ್ರತಿಯೊಬ್ಬರೂ, ಕಲಿಯುವವರು ಹಾಗು ಕಲಿಸುವವರು ಎರಡೂ ಆಗಿರುತ್ತಾರೆ. ಇದಕ್ಕೆ ಹಿಂದೆ ಎಡ್ಗರ್ ಫೊರ್ ಅವರ ಅಧ್ಯಕ್ಷತೆಯಲ್ಲಿ ತಯಾರಾದ ``ಇರಲು ಕಲಿ'' ("Learning to Be" -1972) ಎಂಬ ಶೀರ್ಷಿಕೆಯ ವಿಶ್ವಸಂಸ್ಥೆಯ ವರದಿಯ ಬುನಾದಿಯ ಮೇಲೆ ಈ ವರದಿಯು ರೂಪು ತಳೆದಿದೆ. ದಲೋರ್ ವರದಿಯು ಯಾವ ತೀರ್ಮಾನಗಳು ಹಾಗು ಶಿಫಾರಸುಗಳು ಸಾರ್ವತ್ರಿಕವಾಗಿ ಸಮ್ಮತವಾಗಿದ್ದು ಒಂದು ರಾಷ್ಟ್ರಾದ್ಯಂತ ಅನ್ವಯಯೋಗ್ಯವಾಗಿವೆಯೋ ಅವನ್ನು ಕಂಡುಕೊಳ್ಳುವ ಕಠಿಣ ಕಾರ್ಯವನ್ನು ಕೈಗೆತ್ತಿಕೊಂಡಿತು. ಈ ವರದಿಯು, ``ನಾವೆಲ್ಲರು ನಮ್ಮ ಸಮಾಜಕ್ಕೆ ಸ್ವಾಗತಿಸಬೇಕಾದ ಮಕ್ಕಳು, ಯುವಜನತೆಗೆ ನಮ್ಮ ಪ್ರೀತ್ಯಾದರಗಳನ್ನು ತೋರಲು ಹಾಗು ಹುಟ್ಟುತ್ತಲೇ ಹಕ್ಕಾಗಿ ಪಡೆದುಕೊಂಡುಬಂದಿರುವ ಸಮಾಜದಲ್ಲಿನ ಅವರ ಸ್ಥಾನವನ್ನು ಯಾವುದೇ ಅಭ್ಯಂತರವಿಲ್ಲದೆ ಅವರಿಗೆ ನೀಡಲು ಶಿಕ್ಷಣವನ್ನು ಸಾಧನವನ್ನಾಗಿ ಕಾಣಬೇಕೆಂಬ ನೂತನ ದೃಷ್ಟಿಕೋನಗಳನ್ನು ನೀಡಿತು'' (ಪುಟ 12). ``ಪ್ರತಿಯೊಬ್ಬ ವ್ಯಕ್ತಿಯೂ ಹಲವಾರು ಜ್ಞಾನರೂಪಗಳ ಪರಿಚಯ ಪಡೆಯಬಹುದಾದ ಔಪಚಾರಿಕ ಶಿಕ್ಷಣವ್ಯವಸ್ಥೆಯ ಸ್ಥಾನವನ್ನು ಯಾವುದೇ ಪರ್ಯಾಯ ವ್ಯವಸ್ಥೆಯೂ

ತುಂಬಲಾರದು'' (ಪುಟ 19) ಎಂದು ಗಮನಿಸುವ ಮೂಲಕ ಔಪಚಾರಿಕ ಶಿಕ್ಷಣವ್ಯವಸ್ಥೆಯ ಪ್ರಾಮುಖ್ಯ ಹಾಗು ಶಿಕ್ಷಕರ ಪಾತ್ರದ ಮಹತ್ತ್ವವನ್ನು ಎತ್ತಿಹಿಡಿದು, ``ಶಿಕ್ಷಕರು ಮತ್ತು ಮಕ್ಕಳ ಬಾಂಧವ್ಯಕ್ಕೆ ಪ್ರತಿಯಾಗಿ ಯಾವುದೂ ಇಲ್ಲ'' (ಪುಟ 19) ಹಾಗು ``ಮನುಕುಲವು ತನ್ನ ಬಗ್ಗೆ, ಪ್ರಕೃತಿಯ ಬಗ್ಗೆ ಹಾಗು ತಾನು ಸೃಷ್ಟಿಸಿರುವ, ಆವಿಷ್ಕರಿಸಿರುವ ಎಲ್ಲಾ ಪ್ರಮುಖ ವಿದ್ಯಮಾನಗಳ ಬಗ್ಗೆ ತನ್ನಲ್ಲಿರುವ ಜ್ಞಾನವನ್ನು ಮಕ್ಕಳಿಗೆ ದಾಟಿಸುವುದು'' (ಪುಟ 20) ಶಿಕ್ಷಕರ ಹೊಣೆಗಾರಿಕೆ ಎಂದು ಸಾರುತ್ತದೆ. ಜೀವನಪರ್ಯಂತ ಕಲಿಕೆಯಲ್ಲಿ ತೊಡಗಿಸಿಕೊಳ್ಳುವುದು ಹಾಗು, ``ಕಲಿಕೆಯಲ್ಲಿ ತೊಡಗಿಸಿಕೊಂಡಿರುವ ಸಮಾಜದ ಕಡೆಗೆ ಮುನ್ನಡೆ''ಯುವುದರ ಮಹತ್ತ್ವವನ್ನು ಒತ್ತಿ ಹೇಳುವುದು ಕೂಡ ಈ ವರದಿಯ ಪ್ರಧಾನ ಕೆಲಸಗಳಲ್ಲಿ ಒಂದು ಎಂದು ಹೇಳಬಹುದು. ದಲೋರ್ ವರದಿಯ ಶೀರ್ಷಿಕೆಯು ಅದು ಮುಖ್ಯವಾಗಿ ಪ್ರತಿಪಾದಿಸುವ, ``ಪ್ರತಿಯೊಬ್ಬರಲ್ಲೂ ಗುಪ್ತ ಸಂಪತ್ತಿನ ರೀತಿ ಸುಪ್ತವಾಗಿರುವ ಯಾವುದೇ ಪ್ರತಿಭೆಯನ್ನು ಹೊರತೆಗೆಯದೇ ಬಿಡಲಾಗದು'' (ಪುಟ 21) ಎಂಬ ಹೇಳಿಕೆಯಿಂದ ಪ್ರೇರಿತವಾಗಿದೆ. ಅವುಗಳಲ್ಲಿ ಸಾಮರ್ಥ್ಯಗಳಾದ ಜ್ಞಾಪಕಶಕ್ತಿ, ತಾರ್ಕಿಕಶಕ್ತಿ, ಕಲ್ಪನಾಶಕ್ತಿ, ದೈಹಿಕಸಾಮರ್ಥ್ಯ, ಸೌಂದರ್ಯಪ್ರಜ್ಞೆ, ಇತರರೊಂದಿಗೆ ಸಂವಹನ ನಡೆಸುವ ಸಾಮರ್ಥ್ಯ, ನಾಯಕತ್ವದ ಗುಣ ಇವೇ ಮೊದಲಾದ ಇದೇ ರೀತಿಯ ಇತರೆ ಗುಣಗಳು ಸೇರಿಕೊಳ್ಳುತ್ತವೆ. ಈ ವರದಿಯು ಇಪ್ಪತ್ತೊಂದನೇ ಶತಮಾನದಲ್ಲಿ ಪರಿಹರಿಸಿಕೊಳ್ಳಲೇಬೇಕಾದ ಏಳು ``ಆತಂಕ''ಗಳನ್ನು ಗುರುತಿಸುವುದೇ ಅಲ್ಲದೆ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಸಮುದಾಯಗಳ ನಿರ್ಮಾಣಕ್ಕೆ ನೆರವಾಗಬಹುದಾದ ನಾಲ್ಕು ಸ್ತಂಭಗಳನ್ನು ಕುರಿತು ಪ್ರಸ್ತಾವಿಸುತ್ತದೆ. (ಕೋಷ್ಟಕ 1 ಮತ್ತು 2ನ್ನು ನೋಡಿ). ಇವುಗಳನ್ನು ವರದಿಯ ದಿಕ್ಸೂಚಿ ಮುಖ್ಯಾಂಶಗಳಾಗಿ ಪರಿಗಣಿಸಲಾಗುವುದು.

ವರದಿಯು ಮಾನವನ ಸುಸ್ಥಿರ ಅಭಿವೃದ್ಧಿ, ಪ್ರಜಾಪ್ರಭುತ್ವ ಹಾಗು ಪರಸ್ಪರ ಹೊಂದಾಣಿಕೆಗಳ ಕಾಣ್ಕೆಯ ಬಗ್ಗೆ ಪ್ರಸ್ತಾವಿಸುವುದೇ ಅಲ್ಲದೇ, ಅದಕ್ಕಾಗಿ ನಿವಾರಿಸಿಕೊಳ್ಳಬೇಕಾದ ಏಳು ಆತಂಕಗಳನ್ನು ಗುರುತಿಸುವ ದೂರದೃಷ್ಟಿ ಹೊಂದಿದೆ. ವರದಿಯು ಈ ಆತಂಕಗಳನ್ನು ನಿಜವಾಗಿ ನಿವಾರಿಸಿಕೊಳ್ಳಲು ಇರುವ ದಾರಿಗಳ ಬಗ್ಗೆ ಯಾವುದೇ ಸೂಚನೆ ನೀಡದೆ, ಈ ಆತಂಕಗಳಿಗೆ ಕಾರಣವಾದ ಯಾವ ಅಂಶಗಳನ್ನು ನೀತಿರಚನೆಕಾರರು ಪರಿಗಣಿಸಬೇಕೋ ಅಂತಹ ಹಲವಾರು ಅಂಶಗಳನ್ನು ಪ್ರಾಸಂಗಿಕವಾಗಿ ತಿಳಿಸುತ್ತಾ ಸಾಗುತ್ತದೆ. ಮೇಲೆ ಪ್ರಸ್ತಾವಿಸಿದ ಆಧಾರ ಸ್ತಂಭಗಳಲ್ಲಿ, ``ಒಟ್ಟಿಗೆ ಬಾಳಲು ಕಲಿ''ಯುವುದೇ ``ನೂತನ ಚೇತನ''ವನ್ನು ನಮ್ಮ ನಡುವೆ ಬರಮಾಡಿಕೊಳ್ಳಲು, ಸಾರ್ವಜನಿಕ ತಿಳುವಳಿಕೆಯನ್ನು ಹೆಚ್ಚಿಸಲು ಹಾಗು ಪರಸ್ಪರ ಅವಲಂಬನೆಯ ಪೋಷಣೆಗೆ ಅತಿ ನಿರ್ಣಾಯಕ ಸ್ತಂಭವೆಂದು ನಿಖರವಾಗಿ ಹೇಳುತ್ತದೆ. ``ಅರಿಯಲು ಕಲಿ'', ``ಮಾಡಲು ಕಲಿ'' ಹಾಗು ``ಇರಲು ಕಲಿ'' ಎಂಬ ಉಳಿದ ಮೂರು ಸ್ತಂಭಗಳು ``ಒಟ್ಟಿಗೆ ಬಾಳಲು ಕಲಿ''ಯುವುದಕ್ಕೆ ಆಧಾರಭೂತವಾಗಿವೆ ಎನ್ನುತ್ತದೆ.

**ಭಾರತದಲ್ಲಿನ ಶಿಕ್ಷಣನೀತಿಯ ವಿಷಯವಾಗಿ ದಲೋರ್ ವರದಿ ಎಷ್ಟು ಪ್ರಸ್ತುತ ?**

ಅತ್ಯಮೂಲ್ಯ ವಿಮರ್ಶೆ, ಶಿಫಾರಸ್ಸುಗಳನ್ನು ಮಾಡಿದ್ದರೂ ದಲೋರ್ ವರದಿಯು ಶೈಕ್ಷಣಿಕ ಸಮುದಾಯದ ಅಥವಾ ನೀತಿರಚನೆಕಾರರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಲಿಲ್ಲ. ಭಾರತವು 90ರ ದಶಕದ ಸಾರ್ವತ್ರಿಕ ಶಿಕ್ಷಣದ ಗುರಿಯನ್ನು ತಲುಪಲು ಹೊರಗಿನಿಂದ ಧನಸಹಾಯ ಮಾಡುವ ಮಂಡಲಿಗಳ ಅಂಗೀಕಾರದಂತಹ ಹೊಸ ಕಾರ್ಯಕ್ರಮಗಳ, ಶೈಕ್ಷಣಿಕ ಆಡಳಿತದಲ್ಲಿ ಸುಧಾರಣೆಗಳ, ಶಿಕ್ಷಣಕ್ಷೇತ್ರದ ವಿಕೇಂದ್ರೀಕರಣದ ಹಾಗು ಸಾರ್ವಜನಿಕ-ಖಾಸಗಿ ಸಹಭಾಗಿತ್ವಕ್ಕಾಗಿ ಚಾಚಿದ ಮುಕ್ತಹಸ್ತ ಇವೇ ಮೊದಲಾದ ವಿಭಿನ್ನ ರೀತಿಯ ಸಂಘರ್ಷ ಹಾಗು ಬದಲಾವಣೆಗಳನ್ನು ಎದುರಿಸುತ್ತಿದ್ದುದು ಇದಕ್ಕೆ ಕಾರಣವಿರಬಹುದು. ದಲೋರ್ ವರದಿಯು ಈ ಮೂಲ ಸವಾಲುಗಳಿಗೆ ಆಕರ್ಷಕವಾಗಿ ತೋರದಿದ್ದರಿಂದ ನೀತಿ ಕಾರ್ಯಸೂಚಿಯ ಮೇಲೆ ಯಾವುದೇ ಬಲವಾದ ಪ್ರಭಾವ ಬೀರಲು ಅದು ವಿಫಲವಾಯಿತು. ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ಸಮುದಾಯಗಳ ಬಗ್ಗೆಯಾಗಲೀ, ಶಿಕ್ಷಣದ

ವಿಸ್ತೃತ ಗುರಿಗಳ ಬಗ್ಗೆಯಾಗಲೀ ದಲೋರ್ ವರದಿಯು ಪ್ರಸ್ತಾವಿಸುವ ಕಾಣ್ಕೆಯನ್ನು ನನಸುಮಾಡುವತ್ತ ಕೈಜೋಡಿಸಲು ನಾವೀಗ ತಯಾರಿದ್ದೇವೆಯೇ ಎಂಬುದಷ್ಟೇ ಪ್ರಸ್ತುತ.

ಕ್ಷಿಪ್ರ ಬದಲಾವಣೆಗಳನ್ನು ಕಾಣುತ್ತಿರುವ ಜಾಗತಿಕ ಸಮಾಜಗಳಲ್ಲಿ ಶಿಕ್ಷಣ ವ್ಯವಸ್ಥೆಗಳು ಯಾವ ರೀತಿ ಸಂಘಟಿತಗೊಳ್ಳಬೇಕು ಎಂಬುದಕ್ಕೂ, ದಲೋರ್ ವರದಿಯು ಕೊಡಮಾಡುವುದಕ್ಕೂ ಗಾಢ ಸಂಬಂಧವಿದೆ. ನೀತಿ ಮಟ್ಟದಲ್ಲಿ ನಾವು ಈ ವಿಚಾರಗಳೊಂದಿಗೆ ತೊಡಗಿಸಿಕೊಂಡೆವು ಎಂದರೆ ನಮ್ಮ ಶಿಕ್ಷಣದ ಗುರಿಗಳನ್ನು, ಶಿಕ್ಷಣದ ತತ್ತ್ವಗಳನ್ನು, ಪಠ್ಯಕ್ರಮ, ಭಾಷೆ ಹಾಗು ಬೋಧನಾ-ಸಾಧನಗಳನ್ನು ಪರಿಶೀಲನೆಗೆ ಒಳಪಡಿಸಬೇಕಾಗುತ್ತದೆ. ಅಂದರೆ, ಬಿಡಿಬಿಡಿಯಾಗಿ ಸುಧಾರಣೆಗಳನ್ನು ತರುವ ವಿಧಾನದ ಬದಲು ಹೊಸದೊಂದು ಶಿಕ್ಷಣನೀತಿಯನ್ನೇ ಮಂಡಿಸಬೇಕಾಗುತ್ತದೆ. ಅದು ಏಕಕಾಲಕ್ಕೆ ದೂರದರ್ಶಿಯೂ, ತಕ್ಷಣದಸವಾಲುಗಳಿಂದಾಚೆಗೆ ದೃಷ್ಟಿಬೀರುವಂತದ್ದೂ ಆಗಿ, ನಿರ್ಲಕ್ಷ್ಯಕ್ಕೊಳಗಾದ ಅಥವಾ ಭಾಗಶಃ ಅನುಷ್ಠಾನಗೊಂಡ ಹಿಂದಿನ ನೀತಿಗಳಲ್ಲಿನ ಪ್ರಸ್ತುತ ವಿಚಾರಗಳ ತಳಪಾಯದ ಮೇಲೆ ಕಟ್ಟುವಂತಹ ಹೊಸ ನೀತಿಯಾಗಿರಬೇಕಾಗುತ್ತದೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ (ರಾ.ಪ.ಚೌ. 2005) ``ಆತಂಕ''ಗಳು ಮತ್ತು ``ಸ್ತಂಭ''ಗಳೆರಡರ ಬಗ್ಗೆಯೂ ವಿವಿಧ ರೀತಿಗಳಲ್ಲಿ ಸ್ಥೂಲ ಉಲ್ಲೇಖವಿದೆ. ಪಠ್ಯಕ್ರಮದ ಉದ್ದೇಶಗಳಲ್ಲಿ ಜಾಗತಿಕತೆ ಹಾಗು ಸ್ಥಳೀಯತೆಗಳನ್ನು ಸರಿದೂಗಿಸುವಲ್ಲಿನ ಒತ್ತಡ ಹಾಗು ಅತಿ ವೇಗವಾಗಿ ವಿಸ್ತರಣೆಗೊಳ್ಳುತ್ತಿರುವ ಜ್ಞಾನವನ್ನು ಅರಗಿಸಿಕೊಳ್ಳುವ ಸವಾಲುಗಳನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ನೀತಿ ರಚನೆಕಾರರಷ್ಟೇ ಅಲ್ಲ ಶಿಕ್ಷಕರು ಹಾಗು ಶಿಕ್ಷಣವೃತ್ತಿಯಲ್ಲಿರುವವರು ಕೂಡ ಗುರುತಿಸಿದ್ದಾರೆ. ವೈಯಕ್ತಿಕ ಹಾಗು ಸಾಂಪ್ರದಾಯಿಕ ವ್ಯವಸ್ಥೆಗಳನ್ನು, ಅದರಲ್ಲೂ ವಿಶೇಷವಾಗಿ, ಭಾಷೆ, ಕರಕುಶಲತೆ, ಕಲೆ, ಸ್ಥಳೀಯ ಸಂಸ್ಕೃತಿ ಹಾಗು ಸಾಂಪ್ರದಾಯಿಕ ಕೌಶಲಗಳನ್ನು ಜಾಗತಿಕ ಹಾಗು ಆಧುನಿಕ ಒತ್ತಡಗಳಿಂದ ಸಂರಕ್ಷಿಸಿ ಕಾಪಾಡಿಕೊಳ್ಳುವ ಸವಾಲನ್ನು ಬೇರುಮಟ್ಟದಲ್ಲಿ ಕಾರ್ಯನಿರತರಾಗಿರುವವರು ಎದುರಿಸಬೇಕಾದದ್ದೇ. ನಮ್ಮ ಭಾರತದ ಸಂವಿಧಾನವು ಅವಕಾಶಗಳ ಸಮಾನತೆಗೆ ಮತ್ತು ಗುಣಾತ್ಮಕ ಪಕ್ಷಪಾತಗಳೆರಡಕ್ಕೂ ತನ್ನ ಒಪ್ಪಿಗೆಯ ಮುದ್ರೆ ಒತ್ತಿದ್ದರೂ, ಸ್ಪರ್ಧೆಗೆ ಪ್ರೋತ್ಸಾಹ ನೀಡುವುದರ ಹಾಗು ಅವಕಾಶಗಳ ಸಮಾನತೆಯನ್ನು ಬೆಂಬಲಿಸುವ ನಡುವೆ ಇರುವ ಒತ್ತಡವು ಅದರಲ್ಲೂ ವಿಶೇಷವಾಗಿ ಉನ್ನತ ಶಿಕ್ಷಣಕ್ಷೇತ್ರದಲ್ಲಂತೂ ಚರ್ಚಾಸ್ಪದ ಸಮಸ್ಯೆಯಾಗಿ ಮತ್ತೆ-ಮತ್ತೆ ತಲೆ ಎತ್ತುತ್ತಲೇ ಇರುತ್ತದೆ.

ಜಕೀಯ ಪೈಪೋಟಿಯಲ್ಲಿ ಅಲ್ಪಾವಧಿ ಸಮಸ್ಯೆಗಳಿಗೆ, ಕಾರ್ಯಸೂಚಿಗಳಿಗೆ ಆದ್ಯತೆ ನೀಡುವ ಸಾಧ್ಯತೆ ಹೆಚ್ಚಿರುವಾಗ, ದೀರ್ಘಾವಧಿ ಹಾಗು ಅಲ್ಪಾವಧಿ ಗುರಿಗಳನ್ನು ಸರಿದೂಗಿಸುವಲ್ಲಿ ನೀತಿ ರಚನೆಕಾರರು ನಿರಂತರ ಹೆಣಗಾಡುವುದು ಮತ್ತೊಂದು ಆತಂಕವಾಗಿದೆ. ಶಿಕ್ಷಣದ ದೀರ್ಘಾವಧಿ ಗುರಿಗಳೊಂದಿಗೆ ನಿರ್ದಿಷ್ಟ ಕಾರ್ಯಾಚರಣೆಯ ತಂತ್ರಗಳು ರೂಪಿತವಾಗದಿದ್ದರೆ ಅವು ಬರೀ ವಾಗಾಡಂಬರ ಎನಿಸುವ ಸಾಧ್ಯತೆಯೇ ಹೆಚ್ಚಿದ್ದು, ಅವು ರಾಜಕೀಯ ಕ್ಷೇತ್ರಗಳ ಬೆಂಬಲಕ್ಕೆ ಅರ್ಹವಾಗಲು, ಕ್ಷೇತ್ರಗಳ ಜನರ ಕಲ್ಪನಾಶಕ್ತಿಯನ್ನು ಹಿಡಿದಿಡಲು ವಿಫಲವಾಗುತ್ತವೆ. ಇದರ ಪರಿಣಾಮವೆಂದರೆ, ಯಾವುದೇ ನೀತಿರಚನೆಯ ಕಸರತ್ತು ತನ್ನ ಮೂಲಸ್ವರೂಪದಲ್ಲಿ ಭವಿಷ್ಯದ ಹಾದಿಗಳನ್ನು ಸೂಚಿಸಲೆಂದೇ ನಡೆದರೂ, ವಾಸ್ತವವಾಗಿ, ಅದು ತಕ್ಷಣದ ಒತ್ತಡಗಳನ್ನು ನೀಗಿಕೊಳ್ಳುವುದನ್ನು ಬಿಟ್ಟರೆ ಹೆಚ್ಚಿನದೇನನ್ನೂ ಸಾಧಿಸಲು ಸಾಧ್ಯವಾಗದು. ಈ ಆತಂಕಗಳನ್ನು ವಿರುದ್ಧಾತ್ಮಕ ನಿಲುವುಗಳ ಅಥವಾ ``ಅದು, ಇಲ್ಲದಿದ್ದರೆ ಇದು'' ಎಂಬ ವೈಪರೀತ್ಯಗಳ ಪ್ರತಿಪಾದನೆಯ ಪಟ್ಟಿಯಾಗಿ ಕಾಣದಿರುವುದು ಬಹಳ ಮುಖ್ಯವಾಗುತ್ತದೆ. ಬದಲಿಗೆ, ಆತಂಕಗಳನ್ನು ಒಂದು ನಿರಂತರತೆಯ ಭಿತ್ತಿಯಂತೆ ಅರ್ಥೈಸಿಕೊಂಡು, ಆ ನಿರಂತರತೆಯೊಂದಿಗೆ ಸತತವಾಗಿ ವ್ಯವಹರಿಸುತ್ತಾ ಅದರಲ್ಲಿ ನಮ್ಮ ಸ್ಥಾನವನ್ನು ಗುರುತಿಸಿಕೊಳ್ಳುವುದೇ ನಾವು ಎದುರಿಸುವ ಸವಾಲಾಗುತ್ತದೆ. ಆತಂಕಗಳ ನಿರಂತತೆಯ ಭಿತ್ತಿಯಲ್ಲಿನ ವಿಸ್ತೃತ ರೇಖೆಗಳ

ಹಣೆಬರಹವನ್ನು ಸರ್ಕಾರಿ ಹಾಗೂ ಸರ್ಕಾರೇತರ ಸಂಸ್ಥೆಗಳು ಕಡ್ಡಾಯವಾಗಿ ಅನುಸರಿಸಬೇಕಾದ ಅಧಿಕೃತ ನೀತಿಯ ಮೂಲಕ ನಿರ್ಧರಿಸಬಹುದುಅಥವಾ, ನಿರಂತತೆಯ ಭಿತ್ತಿಯ ಮೇಲಿನ ವಿವಿಧ ಸ್ಥಾನಗಳನ್ನು ಆಯ್ಕೆಪಟ್ಟಿಯಂತೆ ನೀಡಿ, ಒಂದಕ್ಕೊಂದು ಪ್ರತಿಸ್ಪರ್ಧಿಗಳಂತಿರುವ ಈ ಆಯ್ಕೆಗಳ ಅಥವಾ ``ಆತಂಕ''ಗಳ ನಡುವೆ ತಮಗೆ ಬೇಕಾದದ್ದನ್ನು ಆರಿಸಿಕೊಳ್ಳುವ ವಿಧಾನವನ್ನು ಪೋಷಕರಿಗೆ ಬಿಡಬಹುದು.

ಬೇರೆ ರೀತಿಯಲ್ಲಿ ಹೇಳಬೇಕೆಂದರೆ, ಪಠ್ಯಕ್ರಮವು ಎಷ್ಟರ ಮಟ್ಟಿಗೆ ಜಾಗತಿಕವೂ, ಎಷ್ಟರ ಮಟ್ಟಿಗೆ ಸ್ಥಳೀಯವೂ ಆಗಿರಬೇಕು ಎಂಬುದನ್ನು ವಿಧಿಸಲು ಶಿಕ್ಷಣನೀತಿಗೇ ಬಿಡಬೇಕೋ ಅಥವಾ ವಿಭಿನ್ನ ಶಿಕ್ಷಣಸಂಸ್ಥೆಗಳೇ ``ಜಾಗತಿಕ'' ಮತ್ತು ``ಸ್ಥಳೀಯ'' ವಿಚಾರವಾಗಿ ತಮ್ಮ ಗುರಿ ಮತ್ತು ನಂಬಿಕೆಗಳಿಗೆ ಅನುಗುಣವಾಗಿ ಆಯ್ಕೆಗಳನ್ನು ಮುಂದಿಟ್ಟು, ಮಕ್ಕಳು ಅಥವಾ ಪೋಷಕರೇ ಅವರು ಯಾವ ರೀತಿಯ ಶಿಕ್ಷಣವನ್ನು ಬಯಸುತ್ತಾರೆ ಎಂಬುದನ್ನು ಆರಿಸಿಕೊಳ್ಳಲು ಬಿಡಬೇಕೋ, ಎಂಬುದೇ ಪ್ರಶ್ನೆಯಾಗಿದೆ. ಈ ಆತಂಕಗಳ ನಡುವೆ ಪರಸ್ಪರ ಪ್ರತ್ಯಕ್ಷ ಅಥವಾ ಪರೋಕ್ಷ ಸಂಬಂಧಗಳಿವೆ ಎಂಬುದನ್ನು ಗುರುತಿಸುವುದು ಮುಖ್ಯವಾಗುವುದರ ಜೊತೆಗೆ, ಒಂದು ನಿರ್ದಿಷ್ಟ ಆತಂಕದ ವಿಚಾರವಾಗಿ ನಾವು ತೆಗೆದುಕೊಳ್ಳುವ ನಿರ್ಧಾರಗಳು ಬೇರೆ ಆತಂಕಗಳೊಂದಿಗೆ ನಾವು ವ್ಯವಹರಿಸುವ ರೀತಿಯನ್ನು ಪ್ರಭಾವಿಸುವ ಸಾಧ್ಯತೆಯೂ ಇದೆ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ದಲೋರ್ ವರದಿಯಲ್ಲಿ ಪ್ರತಿಪಾದಿಸಲಾಗಿರುವ ನಾಲ್ಕೂ ಸ್ತಂಭಗಳನ್ನು ಉಲ್ಲೇಖಿಸುತ್ತದಾದರೂ, ಅವುಗಳ ನಡುವೆ ``ಒಟ್ಟಿಗೆ ಬಾಳಲು ಕಲಿ''ಯುವುದನ್ನು ಮುಖ್ಯಸ್ತಂಭವೆಂದೂ, ಇಪ್ಪತ್ತೊಂದನೇ ಶತಮಾನದ ಜಾಗತಿಕ ಸವಾಲುಗಳನ್ನು ಎದುರಿಸಲು ಈ ಸ್ತಂಭದ ನಿರ್ಮಾಣ ಅನಿವಾರ್ಯವೆಂದೂ, ಅರಿಯಲು, ಮಾಡಲು ಹಾಗು ಇರಲು ಕಲಿ ಎಂಬ ಉಳಿದ ಮೂರು ಸ್ತಂಭಗಳು ಮುಖ್ಯಸ್ತಂಭಕ್ಕೆ ಆಧಾರವನ್ನು ಒದಗಿಸುತ್ತವೆ ಎಂದೇ ದಲೋರ್ ವರದಿ ಗುರುತಿಸುತ್ತದೆ ಎಂಬುದನ್ನು ನಾವು ಗಮನಿಸುವುದು ಸೂಕ್ತ. ಕಲಿಕೆಯ ಬಗ್ಗೆಗಿನ ಈ ಸರ್ವಾಂಗೀಣ ಗ್ರಹಿಕೆಯು ನಮ್ಮ ಇಂದಿನ ಶಿಕ್ಷಣವ್ಯವಸ್ಥೆಯು ಸಂಘಟಿತವಾಗಿರುವ ವಿಧಾನದಲ್ಲಿ ಕಾಣುವುದೇ ವಿರಳ. ಜ್ಞಾನದ ಕುರಿತ ಸಂಕುಚಿತ ಒಮ್ಮುಖತೆಯೂ ವಿದ್ಯಾರ್ಥಿಗಳನ್ನು ಹೆಚ್ಚು-ಹೆಚ್ಚು ಮಾಹಿತಿ ಸಂಗ್ರಹಿಕೆಗಾಗಿ ತಯಾರುಮಾಡುತ್ತಿದೆಯೇ ವಿನಹ ಅರಿಯಲು ಕಲಿಕೆ ಮತ್ತು ಕಲಿಯುವುದು ಹೇಗೆ ಎಂಬ ಕಲಿಕೆಗಳನ್ನು ಪರಿಗಣಿಸುವುದೇ ಕಡಿಮೆ. ಕಲಿಕಾ ಕೌಶಲಗಳಿಗೆ ಹಾಗು ನಮ್ಮಲ್ಲಿ ಹುದುಗಿರುವ ಸಾಮರ್ಥ್ಯಗಳ ಪ್ರಾಪ್ತಿಗೆ ಸಂಬಂಧಿಸಿದ ಉಳಿದ ಸ್ತಂಭಗಳು ಬಹುತೇಕ ನಿರ್ಲಕ್ಷ್ಯಕ್ಕೊಳಗಾಗಿವೆ. ಈ ವರದಿಯ ಪ್ರಕಾರ, ಯಾವುದು ಒಗ್ಗಟ್ಟನ್ನು ಬೆಸೆಯುವುದರ ಕಡೆಗೆ, ಒಟ್ಟಿಗೆ ಬಾಳುವುದನ್ನು ಕಲಿಯುವುದರ ಕಡೆಗೆ ತನ್ನೆಲ್ಲಾ ಗಮನವನ್ನು ಕೇಂದ್ರೀಕರಿಸುತ್ತದೋ, ಆ ಅತಿ ಮುಖ್ಯ ಸ್ತಂಭವು ನಮ್ಮ ಪ್ರಸ್ತುತ ಶಿಕ್ಷಣವ್ಯವಸ್ಥೆಯ ಚೌಕಟ್ಟಿನಿಂದ ಹೊರಗೇ ಇರುವಂತೆ ಭಾಸವಾಗುತ್ತದೆ. ಉಳಿದ ಮೂರು ಸ್ತಂಭಗಳಿಗೆ ಹೋಲಿಸಿದಲ್ಲಿ ಈ ಸ್ತಂಭದೊಂದಿಗೆ ಬೆಸೆದುಕೊಂಡಿರುವ ಮಾರ್ಮಿಕ ರಾಜಕೀಯ ಸೂಚ್ಯಾರ್ಥಗಳು ಈ ವಿದ್ಯಮಾನಕ್ಕೆ ಕಾರಣವಿರಬಹುದೇ? ಕಲಿಕೆ ಹಾಗು ಶಿಕ್ಷಣದ ಗುರಿಗಳನ್ನು ಕುರಿತು ನಮ್ಮ ತಿಳುವಳಿಕೆ ಏನಿದೆಯೋ ಅದಕ್ಕೆ ಈ ನಾಲ್ಕು ಸ್ತಂಭಗಳು ಯಾವ ರೀತಿಯ ಅಭೀಪ್ಸಾತ್ಮಕ ಮೌಲ್ಯವನ್ನು ತಂದುಕೊಡುತ್ತವೆ ಎಂಬುದು ಈ ಸಂದರ್ಭದಲ್ಲಿ ಎತ್ತಬಹುದಾದ ಪ್ರಸ್ತುತ ಪ್ರಶ್ನೆ ಎನ್ನಬಹುದು.ಮಾನವಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಮುಂದಿಟ್ಟಿರುವ ``ರಾಷ್ಟ್ರೀಯ ಶಿಕ್ಷಣನೀತಿ''ಯ ಒಳಸುರಿಗಳ ಟಿಪ್ಪಣಿಯಲ್ಲಿನ ಕೆಲವು ನೀತಿ ಸಲಹೆಗಳು ಕೂಡ ದಲೋರ್ ವರದಿಯ ಶಿಫಾರಸ್ಸುಗಳನ್ನೇ ಅನುಮೋದಿಸುತ್ತವೆ. ಈ ಟಿಪ್ಪಣಿಯಲ್ಲಿ ಕಟ್ಟಿಕೊಡುವ ಕಾಣ್ಕೆಯಲ್ಲಿ ಸ್ಥಳೀಯ ಶ್ರೀಮಂತ ಪರಂಪರೆ ಹಾಗು ಪ್ರಾಚೀನ ಜ್ಞಾನಪದ್ಧತಿಗಳನ್ನು ರಕ್ಷಿಸುವುದರ ಜೊತೆ-ಜೊತೆಗೆ ಜಾಗತಿಕ ಸವಾಲುಗಳನ್ನು ಎದುರಿಸುವ ತುರ್ತು ಅಗತ್ಯದ ಪ್ರಸ್ತಾವವಿದೆ. ಇದು ಹಾಗು ಸಮಾಜದ ಎಲ್ಲ ವರ್ಗಗಳ ಹಿತಾಸಕ್ತಿಗಳನ್ನು ಒಳಗೊಳ್ಳುವ ನಿಷ್ಪಕ್ಷಪಾತದ ಉದ್ದೇಶಗಳನ್ನು ಪ್ರತಿಪಾದಿಸುವುದರ ಜೊತೆಗೆ, ಶೀಘ್ರಗತಿಯಲ್ಲಿ ಬದಲಾಗುತ್ತಿರುವ ಜಾಗತಿಕ,

ಜ್ಞಾನಾಧಾರಿತ ಅರ್ಥವ್ಯವಸ್ಥೆಗೆ ಪ್ರತಿಸ್ಪಂದಿಸುವ ಗುರಿಯನ್ನೂ ಹೊಂದಿದೆ. ಯಾವುದೇ ಸ್ಪರ್ಧಾತ್ಮಕತೆಯು ಸೂಚಿತವಾಗಿರದಿದ್ದರೂ, ಈ ನೀತಿ ಟಿಪ್ಪಣಿಯು ಕೌಶಲ್ಯಗಳ ಬೆಳವಣಿಗೆ ಮತ್ತು ಜ್ಞಾನ ಎರಡಕ್ಕೂ ಒತ್ತು ನೀಡುತ್ತದೆ. ಶೈಕ್ಷಣಿಕ ಅವಕಾಶಗಳು ಸಮಾಜದ ಎಲ್ಲ ವರ್ಗಗಳಿಗೂ ಲಭ್ಯವಿರಬೇಕು ಎಂದು ತಿಳಿಸುವ ಈ ನೀತಿ ಟಿಪ್ಪಣಿಯು, ``ಜೀವನದುದ್ದಕ್ಕೂ ಕಲಿಕೆ''ಯ ಗುರಿಯನ್ನೂ ಒಪ್ಪಿಕೊಳ್ಳುತ್ತದೆ.

ಇತ್ತೀಚಿನ ವರ್ಷಗಳಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯು ನಿಧಾನಗತಿಯದ್ದಾದರೂ, ಕೆಲವು ನಿರ್ದಿಷ್ಟ ಬದಲಾವಣೆಗಳನ್ನು ಕಂಡಿದೆ ಎಂಬುದನ್ನು ಮನಸ್ಸಿನಲ್ಲಿ ಇಡುವುದು ದಲೋರ್ ವರದಿಯ ಕುರಿತ ಒಳನೋಟಗಳ ಹಾಗು ಅದರ ಪ್ರಸ್ತುತತೆಯ ಬಗ್ಗೆಗಿನ ಈ ಚಿಂತನೆಯ ಸಾರಾಂಶವನ್ನು ಸಂಗ್ರಹಿಸುವಲ್ಲಿ ಸಹಾಯಕ್ಕೆ ಬರುತ್ತದೆ. ಈ ವರದಿಯು ಇತರ ದೇಶಗಳು ಎದುರಿಸಿದ (ನಮ್ಮದಕ್ಕಿಂತ ಭಿನ್ನವಲ್ಲದ) ಅನೇಕಾನೇಕ ಸವಾಲುಗಳೊಂದಿಗೆ, ವಿವಾದಾಂಶಗಳೊಂದಿಗೆ ಗುದ್ದಾಡುತ್ತಿದ್ದರೂ ಇದರ ಕೊಡುಗೆಗಳನ್ನು ಗುರುತಿಸುವುದು ನೆರವಿಗೆ ಬರುತ್ತದೆ ಎನಿಸುತ್ತದೆ. ಇದನ್ನೊಂದು ವಾಗಾಡಂಬರದ ವರದಿ ಎಂದು ಪಕ್ಕಕ್ಕೆ ಸರಿಸುವ ಬದಲು ಶೈಕ್ಷಣಿಕ ಸಮುದಾಯವು ಈ ವಿಚಾರಗಳೆಡೆ ಗಮನಹರಿಸಿ, ಅವು ನಮ್ಮ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ನೀಡಬಹುದಾದ ನೆರವನ್ನು ಗಮನವಿಟ್ಟು ಪರಿಶೀಲಿಸುವ, ನಾವು ನಿಜವಾಗಿ ಏನನ್ನು ಕಲಿಯಬೇಕಿದೆ ಎಂಬುದನ್ನು ಪರಿಗಣಿಸುವ ಕಾಲ ಈಗ ಸನ್ನಿಹಿತವಾಗಿದೆ.

ಅರ್ಚನಾ ಮೆಹೆಂದಳೆ ಅವರು ಮುಂಬೈನ ಟಾಟಾ ಸಮಾಜವಿಜ್ಞಾನ ಸಂಸ್ಥೆಯ ``ಶಿಕ್ಷಣದಲ್ಲಿ ಪರಿವರ್ತನೆ ಹಾಗು ಕ್ರಿಯಾತ್ಮಕತೆ''ಗಳ ಬಗ್ಗೆ ಸಂಶೋಧನೆ ನಡೆಸುತ್ತಿರುವ ವಿಭಾಗದ ಪ್ರಾಧ್ಯಾಪಕರಾಗಿದ್ದಾರೆ. ಅವರನ್ನು archana.mehendale@tiss.edu ಮೂಲಕ ಸಂಪರ್ಕಿಸಬಹುದು.

ಅನುವಾದ: ಕುಶಾಲ್ ಬಿ.ಎಸ್

ಪರಿಶೀಲನೆ: ಚಂದ್ರಶೇಖರ್ ಮಂಡೆಕೋಲು